# ಮಣಿರತ್ನಂ ಆಹ್ವಾನಕ್ಕೆ ಸಿದ್ಧಾರ್ಥ್ ನಮನ


ಸಿದ್ಧಾರ್ಥ್, ಪಾರ್ವತಿ

ಸರ್ಕಾರವನ್ನು ಧಾರ್ಷ್ಟ್ಯದಿಂದ ಪ್ರಶ್ನಿಸುವ ಕೆಲವೇ ನಟರಲ್ಲಿ ಒಬ್ಬರಾದ ಸಿದ್ಧಾರ್ಥ್ ತಮಿಳಿನ 'ಆಂಥಾಲಜಿ' ಎನಿಸಿಕೊಂಡಿರುವ 'ನವರಸ'ದ ಒಂದು ಕಥನದಲ್ಲಿ ಅಭಿನಯಿಸಿದ್ದಾರೆ. ಮಣಿರತ್ನಂ ಹಾಗೂ ಜಯೇಂದ್ರನ್ ಈ ಕಥಾಗುಚ್ಛದ ನಿರ್ಮಾಪಕರು. ಇಬ್ಬರೂ ಕರೆಮಾಡಿ, 'ಇನ್‌ಮಯ್' ಎಂಬ ಶೀರ್ಷಿಕೆಯ ಕಥೆಯಲ್ಲಿ ಭಾಗವಹಿಸಲು ಆಹ್ವಾನ ನೀಡಿದಾಗ ಮರುಮಾತೇ ಇಲ್ಲದೆ ಒಪ್ಪಿಕೊಂಡರಂತೆ. ಯಾವುದೋ ಸೂಕ್ಷ್ಮವಾದದ್ದರ ನಿರಾಕರಣೆ ಎಂಬ ಅರ್ಥವನ್ನು 'ಇನ್‌ಮಯ್' ಎಂಬ ಪದ ನೀಡುತ್ತದೆ. ಒಂಬತ್ತು ರಸಗಳನ್ನು ಆಧರಿಸಿದ ಕಥಾಗುಚ್ಛದ ಸಿನಿಮಾ 'ನವರಸ' ನೆಟ್‌ಫ್ಲಿಕ್ಸ್‌ನಲ್ಲಿ ಆಗಸ್ಟ್ 6ರಂದು ತೆರೆಕಾಣಲಿದೆ.

ರತೀಂದ್ರನ್ ಪ್ರಸಾದ್ 'ಇನ್‌ಮಯ್' ಎಂಬ ಕಥಾರಸದ ಭಾಗವನ್ನು ನಿರ್ದೇಶಿಸಿದ್ದು ಅದರ ಗಟ್ಟಿತನ ತಮಗೆ ಖುಷಿ ನೀಡಿದೆ ಎಂದು ಸಿದ್ಧಾರ್ಥ್ ಹೇಳಿದ್ದಾರೆ.

ಕೋವಿಡ್‌ನಿಂದಾಗಿ ಚಿತ್ರೋದ್ಯಮದ ಹಲವರು ಸಂಕಷ್ಟದಲ್ಲಿದ್ದಾರೆ. ಅಂಥ ಅರ್ಹರಿಗೆ ನೆರವು ನೀಡಲು ಧನಸಂಗ್ರಹಣೆಯ ಮಾರ್ಗವಾಗಿಯೂ 'ನವರಸ' ತಯಾರಾಗಿದೆ ಎಂಬ ಸಂಗತಿಯನ್ನೂ ಸಿದ್ಧಾರ್ಥ್ ಬಿಚ್ಚಿಟ್ಟಿದ್ದಾರೆ. ಈ ಕಥಾಗುಚ್ಛದಿಂದ ಬರುವ ಲಾಭದ ಒಂದು ಪಾಲನ್ನು ಚಿತ್ರರಂಗದಲ್ಲಿ ಸಂಕಷ್ಟದಲ್ಲಿ ಇರುವವರಿಗೆ ನೀಡುವ ಕುರಿತು ಯೋಜನೆ ಕೂಡ ತಯಾರಾಗಿದೆಯಂತೆ.

ವಿಜಯ್ ಸೇತುಪತಿ, ಪಾರ್ವತಿ ತಿರುವೊಟ್ಟು ತರಹದ ಗಾಢ ಅನುಭವ ಹಾಗೂ ಗಟ್ಟಿತನ ಇರುವ ನಟ–ನಟಿಯರೂ ಈ ಸಿನಿಮಾದಲ್ಲಿ ನಟಿಸಿದ್ದಾರೆ. ಸಿದ್ಧಾರ್ಥ್ ಅಭಿನಯಿಸಿರುವ ಕಥನದಲ್ಲಿ ಪಾರ್ವತಿ ಕೂಡ ಇದ್ದದ್ದು ಅವರಿಗೆ ಮುದದ ಅನುಭವ ನೀಡಿದೆ. 'ಬಲ್ಲವರಿಂದ ಕಲಿಯುವುದು ಸಾಕಷ್ಟಿದೆ. ಅಂಥ ಅವಕಾಶ ನನಗೆ ಸಿಕ್ಕಿತು' ಎಂದು ಸಿದ್ಧಾರ್ಥ್ ನಮ್ರವಾಗಿ ಹೇಳಿದ್ದಾರೆ.

# ಹುಮಾಗೆ ಮೌನ ಕಲಿಸಿದ ಕೋವಿಡ್



ಕೋವಿಡ್ ಕಾಲ ಅನೇಕರಿಗೆ ಪಾಠಗಳನ್ನು ಕಲಿಸಿದೆ. ಹಿಂದಿ ನಟಿ ಹುಮಾ ಖುರೇಷಿ ಸಹ ತಾವೂ ಅಂಥವರ ಸಾಲಿನಲ್ಲಿ ಇರುವುದಾಗಿ ನಮ್ರವಾಗಿ ಹೇಳಿಕೊಂಡಿದ್ದಾರೆ.

ಕೋವಿಡ್‌ಗೆ ಮುಂಚೆ ಅವರು ಹೆಚ್ಚು ಮಾತನಾಡುತ್ತಿದ್ದರಂತೆ. ಮಧ್ಯಮವರ್ಗದ, ಬಡವರ ಎಷ್ಟೋ ಸಮಸ್ಯೆಗಳ ಅರಿವೇ ಇರಲಿಲ್ಲವಂತೆ. ಈ ಕಾಲದಲ್ಲಿ ಕಷ್ಟದಲ್ಲಿರುವ ಕೆಲವರಿಗೆ ನೆರವಾಗಲು ಮುಂದಾದಾಗ ಸಮಾಜದ ವಾಸ್ತವ ತಮಗೆ ಇನ್ನಷ್ಟು ಚೆನ್ನಾಗಿ ಮನದಟ್ಟಾಯಿತು ಎಂದು ಅವರು ಹೇಳಿಕೊಂಡಿದ್ದಾರೆ. ಮಾತು ಕಡಿಮೆ ಮಾಡಿ, ಮೌನದಲ್ಲೇ ವಿಚಾರ ಮಂಥನ ನಡೆಸುವಂಥ ಮನಸ್ಸನ್ನು ರೂಪಿಸಿಕೊಂಡಿರುವುದಾಗಿಯೂ ತಿಳಿಸಿದ್ದಾರೆ.

ಜುಲೈ 28ಕ್ಕೆ ಹುಮಾ ಅವರಿಗೆ ಮೂವತ್ತೈದು ವರ್ಷ ತುಂಬಿತು. 'ಗ್ಯಾಂಗ್ಸ್ ಆಫ್ ವಸೇಪುರ್' ಚಿತ್ರದಿಂದ ಗುರುತಾಗಿ, ಆಮೇಲೆ ಕಾಲ ಕಾಲಕ್ಕೆ ತಮ್ಮತನದ ಛಾಪನ್ನು ಅಭಿನಯದಲ್ಲಿ ಮೂಡಿಸುತ್ತಾ ಬಂದಿರುವ ಅವರು ಒಂಥರ ಆರಕ್ಕೇರದ ಮೂರಕ್ಕಿಳಿಯದ ನಟಿಯರ ಸಾಲಿನಲ್ಲಿ ನಿಲ್ಲುವವರು. ಹಾಗೆಂದು ತಮ್ಮತನದ ರುಜುವನ್ನು ಹಾಕದೇ ಬಿಟ್ಟವರಲ್ಲ. 'ಕಾಲಾ' ತಮಿಳು ಚಿತ್ರದಲ್ಲಿ ರಜನೀಕಾಂತ್ ಸರಿಸಮನಾಗಿ ನಟಿಸಿ, ತೂಕದ ಪಾತ್ರದಲ್ಲಿ ಎದ್ದುಕಂಡಿದ್ದವರು ಅವರು.

ಕೋವಿಡ್ ಕಾಲದಲ್ಲಿ ಸುದೀರ್ಘಾವಧಿ ಮನೆಯಲ್ಲಿ ಕೂರುವುದೇ ಒಂದು ವ್ಯಾಧಿಯಾಗಿ ಬದಲಾಗುತ್ತದೆ ಎಂದು ಅವರು ಅನುಭವದ ಮಾತನ್ನು ಹಂಚಿಕೊಂಡಿದ್ದಾರೆ. ರೋಗಭೀತಿಯಿಂದಾಗಿ ಮನೆಯಿಂದ ಹೊರಗೆ ಬಾರದೇ ಇರುವುದು ಸರಿಯಲ್ಲ. ಎಚ್ಚರಿಕೆ ವಹಿಸಿ ಕೆಲಸ ಮಾಡಿಕೊಂಡು ಮುಂದೆ ಸಾಗಲೇಬೇಕು ಎಂಬ ಕಿವಿಮಾತನ್ನು ತಮ್ಮ ಎಷ್ಟೋ ಆಪ್ತೇಷ್ಟರಿಗೆ ಹಂಚಿದ್ದಾರೆ. ಮಲಗಿದ್ದ ಅನೇಕರನ್ನು ಎಬ್ಬಿಸಿ ಕೆಲಸಕ್ಕೆ ಹಚ್ಚಿದ್ದಾರೆ.

'ಮಹಾರಾಣಿ' ವೆಬ್ ಸರಣಿಯಲ್ಲಿನ ಅಭಿನಯಕ್ಕಾಗಿ ಉತ್ತಮ ವಿಮರ್ಶೆ ಪಡೆದಿರುವ ಅವರಿಗೆ ಕೋವಿಡ್ ಕಾಲ ಸಿಹಿಸುದ್ದಿಯನ್ನೂ ನೀಡಿದೆ. ಅವರ ಚೊಚ್ಚಲ ಹಾಲಿವುಡ್ ಸಿನಿಮಾ 'ಆರ್ಮಿ ಆಫ್ ದಿ ಡೆಡ್' ತೆರೆಕಂಡಿತು. 'ಬೆಲ್ ಬಾಟಮ್' ಹಿಂದಿ ಚಿತ್ರ ಬಿಡುಗಡೆಗೆ ಸಿದ್ಧವಾಗಿದೆ. ಅಲ್ಪವಿರಾಮ ಪಡೆದಿದ್ದ ಚಿತ್ರೀಕರಣ ಶುರುವಾದ ಮೇಲೆ ಅವರೂ ಎರಡು ಮೂರು ಸಿನಿಮಾಗಳ ಅಭಿನಯಕ್ಕಾಗಿ ಬಣ್ಣ ಹಚ್ಚುತ್ತಿದ್ದಾರೆ.

'ಬದುಕಿನ ಸಣ್ಣ ಸುಖಗಳನ್ನು ನಾವು ಬಿಡಕೂಡದು. ಆಗ ಉಳಿದೆಲ್ಲ ಗೌಣವೆನಿಸುತ್ತದೆ' ಎನ್ನುವುದು ಅವರು ನಂಬಿರುವ ತತ್ತ್ವ.

■ ವಿಶಾಖ ಎನ್.